ಹಲವಾರು ಹೊಸ ಸುದ್ದಿಗಳು ಸಿಗುತ್ತಿದ್ದವು. ಹೊಸ ಪ್ರತಿಭೆಗಳು ನೋಡಸಿಗುತ್ತಿದ್ದವು. ಇದರಿಂದ ಸೀತಾಪುರವು ಸೋಶಿಯಲ್ ಮೀಡಿಯಾದ ಬಹುದೊಡ್ಡ 'ಸ್ಟಾರ್'ನಂತಾಗಿ ಆಗಿಹೋಯಿತು. ಜೊತೆಗೆ ಪ್ರಭಾಕರನೂ ಕ್ರಮೇಣ ಸೀತಾಪುರದ ಸೋಶಿಯಲ್ ಮೀಡಿಯಾದ ನಿರೂಪಕನ ಹಾಗೆ ತೋರತೊಡಗಿದ.

ಹೀಗೊಂದು ವಾರದಲ್ಲಿ ಆನಂದಣ್ಣ ದೇವಸ್ಥಾನದಲ್ಲಿ ಮತ್ತೆ ಒಂದು ಮೀಟಿಂಗ್ ಕರೆದರು. ಹಿಂದಿನಂತೆ ಊರಿಗೆ ಊರೇ ನೆರೆಯಿತು. ವೇದಿಕೆಯಲ್ಲಿ ಈ ಬಾರಿ ಸಂಜಯ್, ಶೆಟ್ಟರು ಮತ್ತು ಆನಂದಣ್ಣನ ಜೊತೆ ಸಂದೇಶ್, ಪ್ರಭಾಕರ ಹಾಗೂ ನವ್ಯ ಸೇರಿಕೊಂಡರು. ನವ್ಯ ಕಳೆದ ಒಂದು ವಾರದಲ್ಲಿ ಸೀತಾಪುರದಲ್ಲಿ ಏನೇನು ನಡೆದಿದೆ ಎಂಬುದನ್ನು ವಿವರಿಸಿದಳು. ಆದರೆ ಎಲ್ಲರೂ ಇದುರು ನೋಡುತ್ತಿದ್ದುದೇ ಬೇರೆ. ಆ ಸಮಯವೂ ಬಂತು. ಅದು ಕಾಟೇಜ್‌ನಲ್ಲಿ ನಿಲ್ಲಲು ಯಾರು ಆಯ್ಕೆಯಾಗಿದ್ದಾರೆ ಎನ್ನುವ ವಿಷಯವನ್ನು ಊರಿಗೆಲ್ಲ ತಿಳಿಸುವ ಸಮಯ. ಸಂಜಯ್ ವೇದಿಕೆಯ ಮುಂದೆ ಬಂದು ಎಲ್ಲರಿಗೂ ಕೈಮುಗಿದು ಮಾತನಾಡಲು ನಿಂತ.

'ನಿಮ್ಮೆಲ್ಲರ ಸಹಕಾರದಿಂದ ಹಾಗೂ ಶೆಟ್ಟರ, ಆನಂದಣ್ಣನ ಮಾರ್ಗದರ್ಶನದ ನೆರಳಲ್ಲಿ ನಾವು ಎರಡು ಕಾಟೇಜ್ ಕಟ್ಟಿದ್ದೇವೆ. ಅದರಲ್ಲಿ ಉಳಕೊಳ್ಳಲು ಎರಡು ಗುಂಪುಗಳು ಹರಾಜು ಗೆದ್ದಿವೆ. ಶೆಟ್ಟರ ಕಾಟೇಜ್‌ಗೆ ಒಂದು ಫ್ಯಾಮಿಲಿ ಬರಲಿದೆ. ಅದರಲ್ಲಿ ಗಂಡ ಹೆಂಡತಿ ಮತ್ತು ಮಕ್ಕಳು ಇರುತ್ತಾರೆ. ಈ ಫ್ಯಾಮಿಲಿ ಮುಂಬಯಿಯದ್ದು. ಇನ್ನೊಂದು ಆನಂದಣ್ಣನ ಕಾಟೇಜ್‌ನಲ್ಲಿ ಉಳಕೊಳ್ಳಲು ಬರುವವರು. ಅದಕ್ಕೆ ಒಂದು ಹುಡುಗರ ಗುಂಪು ಸಿಕ್ಕಿದೆ. ಇವರಲ್ಲಿ ನಾಲ್ಕು ಜನ ನಮ್ಮ ದೇಶದಿಂದ ಬಂದವರು. ಅವರ ಮುಖ್ಯಸ್ಥ ಕೇರಳದವನು. ಉಳಿದ ತಂಡದಲ್ಲಿ ಒಬ್ಬ ಚೀನಾದಿಂದ ಬಂದವನಾಗಿದ್ದರೆ, ಮತ್ತೆ ಇಬ್ಬರು ಯೂರೋಪ್‌ನಿಂದ ಹಾಗೂ ಒಬ್ಬ ಅಮೆರಿಕದಿಂದ ಬರುತ್ತಾರೆ. ಈ ಗುಂಪು ಸೀತಾಪುರವನ್ನು ವಿಶ್ವಕ್ಕೆ ಪರಿಚಯ ಮಾಡುವುದರಲ್ಲಿ ಸಹಾಯ ಮಾಡಲಿದೆ.'

ಜನರ ನಡುವಿಂದ 'ಕಾರಂತರೇ, ಈ ಏಲಂ ಎಷ್ಟಕ್ಕೆ ಹೋಯ್ತು?' ಎಂಬ ಸ್ವರ ಕೇಳಿ ಬಂತು.

ಸಂಜಯ್ 'ಕಾಟೇಜ್‌ನಲ್ಲಿ ಉಳಕೊಳ್ಳಲು ದಿನಕ್ಕೆ ಹತ್ತು ಸಾವಿರ ಕೊಡುತ್ತಿದ್ದಾರೆ. ಹಾಗೇ ಈ ಎರಡು ಗುಂಪು ಕೂಡಾ ಒಂದೊಂದು ಲಕ್ಷದ ದೇಣಿಗೆ ಕೊಟ್ಟಿದೆ' ಅಂದ.

ಶೆಟ್ಟರ ಮತ್ತು ಆನಂದಣ್ಣನ ಮುಖ ಅರಳಿತು. ಆನಂದಣ್ಣ ಎಲ್ಲರಿಗೂ ಕೈಮುಗಿದು 'ನೋಡಿ, ಇವತ್ತು ನಮ್ಮ ಜಾಗದಲ್ಲಿ ಕಾಟೇಜ್ ಮಾಡಿದ್ದೇವೆ. ನಮ್ಮ ಕಾರಂತರ ಉದ್ದೇಶ ಅಂದರೆ, ನಮ್ಮ ಊರಲ್ಲಿ ಅಲ್ಲಲ್ಲಿ ಕಾಟೇಜ್ ಮಾಡುವುದು. ಇದು ಎಲ್ಲರಿಗೂ ಒಳ್ಳೆ ಅವಕಾಶ ಒದಗಿಸುತ್ತದೆ. ಹಾಗಾಗಿ ಈ ಸಲ ಈ ಕಾಟೇಜುಗಳಲ್ಲಿ ಉಳಕೊಳ್ಳಲು ಬರುವವರು ಬಹಳ ಉತ್ತಮ ಅಭಿಪ್ರಾಯ ಪಡೆಯಬೇಕು. ಅದಕ್ಕಾಗಿ ನಮ್ಮ ಕಾರಂತರ ಸಲಹೆ ಮೇರೆಗೆ ಪ್ರತೀದಿನ ಅವರಿಗೆ ಸೀತಾಪುರದ ವಿಶೇಷಯನ್ನು ತೋರಿಸುವ ಪ್ರಯತ್ನದ ಆಲೋಚನೆ ಇದೆ. ಅದಕ್ಕೆ ನಿಮ್ಮೆಲ್ಲರ ಸಹಾಯ ಬೇಕು' ಅಂದರು.

ಈ ಮಾತಿಗೆ ಶೆಟ್ಟರು ತಲೆದೂಗಿದರು. ಊರ ಮಂದಿ ತಮ್ಮ ಸಂಪೂರ್ಣ ಸಹಾಯ ನೀಡುವ ಭರವಸೆ ನೀಡಿದರು. ಅತಿಥಿಗಳಿಗೆ ಸೀತಾಪುರದ ಕಾಡಿನ ಹಾಗೂ ಹಳ್ಳಿಯ ಸಂಪೂರ್ಣ ಅನುಭವ ಕೊಡುವ ಕಾರ್ಯಕ್ರಮ ರೂಪಿಸುವುದಾಗಿ ಹೇಳಿದರು. ಬಾಬಣ್ಣ ಮುಂದೆ ಬಂದು ತಾನು ಅವರಿಗೆ ಐದು ದಿನವೂ ಹೊಸ ಹೊಸ ಅಡುಗೆ ಮಾಡಿ ಸೀತಾಪುರದ ಸವಿರುಚಿ ಮತ್ತು ಚಟ್ಟಂಬಡೆಯ ಕೊಡುಗೆ ಕೊಡುವುದಾಗಿ ಹೇಳಿದರು.

ಸಂಜಯ್ ಈ ಗುಂಪುಗಳು ಮುಂದಿನ ಆದಿತ್ಯವಾರ ಸೀತಾಪುರಕ್ಕೆ ಬರುವುದಾಗಿ ತಿಳಿಸಿದ. ಎಲ್ಲರೂ ಅವರನ್ನು ಎದುರುಗೊಳ್ಳಲು ಉತ್ಸುಕರಾದರು. ಇದನ್ನೆಲ್ಲಾ ಪ್ರಭಾಕರ ರೆಕಾರ್ಡ್ ಮಾಡಿ ಅಪ್‌ಲೋಡ್ ಮಾಡಿದ. ಇಡೀ ಜಗತ್ತಿಗೆ ಸೀತಾಪುರದ ಈ ವಿಷಯ ತಿಳಿದು ಹೋಯಿತು.

ಈ ನಡುವೆ ಸೀತಾಪುರದ ಜನ ಪ್ರಭಾಕರನನ್ನು ಭೇಟಿಯಾಗಿ, 'ಸಣ್ಣ ಶೆಟ್ರೇ, ಬರುವ ವಾರ ಒಂದು ಹಳ್ಳಿ ಎರಡು ತಿಂಗಳು ಕಾರ್ಯಕ್ರಮದ ಕೊನೆಯ ವಾರ. ಈ ನಮ್ಮ ಕಾರಂತರು ಕಾರ್ಯಕ್ರಮದ ನಂತರ ಅಮೆರಿಕಕ್ಕೆ ಹೊರಡುತ್ತಾರೆ ತಾನೇ? ಆದರೆ ನಮಗನಿಸುವುದು ಅವರಿಗೆ ಅಮೆರಿಕಕ್ಕೆ ಹೋಗಬೇಕಲ್ಲ, ಇಲ್ಲೇ ಸೀತಾಪುರದಲ್ಲಿ ನಿಲ್ಲಲು ಸಾಧ್ಯ ಇಲ್ಲ, ಅಲ್ವ? ಹಾಗೇ ಸಂದೇಶ್ ಮತ್ತು ನವ್ಯ ಕೂಡಾ ಇಲ್ಲಿಂದ ಹೊರಟರೆ? ಆಮೇಲೆ ಸೀತಾಪುರದ ಗತಿಯೇನು?' ಎಂದು ಕೇಳಿದರು.

ಪ್ರಭಾಕರನಿಗೆ ಒಮ್ಮೆಗೇ 'ಹೌದಲ್ಲ' ಅನಿಸಿತು. ಸೀತಾಪುರದ ಮಂದಿ ಅವನನ್ನು ನಂಬಿದ್ದರು. ಈವರೆಗೆ ಸಂಜಯನ ಕ್ಯಾಮರಾಮ್ಯಾನ್ ಆಗಿ ತಿರುಗುತ್ತಿದ್ದ ಪ್ರಭಾಕರ ಈಗ ಸೀತಾಪುರದ ಭವಿಷ್ಯವನ್ನು ರೂಪಿಸುವವರಲ್ಲಿ ಒಬ್ಬ ಎಂದು ಜನ ಅವನ ಬಗ್ಗೆ ಭರವಸೆ ಇಟ್ಟುಕೊಂಡಿದ್ದರು. ಪ್ರಭಾಕರ 'ನೋಡೋಣ' ಎಂದ.

ಪ್ರಭಾಕರನಿಗೆ ನವ್ಯಳ ಬಗ್ಗೆ ಗೌರವವೂ ಸಲಿಗೆಯೂ ಇತ್ತು. ಈ ಪ್ರಶ್ನೆ ನವ್ಯಳಲ್ಲಿ ಕೇಳುವುದು ಸರಿ ಅಂದುಕೊಂಡ. ಪ್ರಭಾಕರ ನವ್ಯಳನ್ನು ಭೇಟಿಯಾದ. 'ಒಂದು ಹಳ್ಳಿ ಎರಡು ತಿಂಗಳು' ಕಾರ್ಯಕ್ರಮವೇನೋ ಮುಗಿದ ನಂತರ ಸೀತಾಪುರದ ಭವಿಷ್ಯ ಏನು? ಎಂದು ಪ್ರಶ್ನೆ ಮಾಡಿದ.

ನವ್ಯ ಹೇಳಿದಳು. 'ನೋಡಿ ಪ್ರಭಾಕರ್, ಈ ಸೋಶಿಯಲ್ ಮೀಡಿಯಾ ಇದೆಯಲ್ಲಾ, ಇದು 'ಸೆನ್ಸೇಷನ್'ನ ಮೇಲೆ ನಿಂತಿದೆ. ಯಾರಿಗೂ ಸಾಮಾನ್ಯ ವಿಷಯದ ಮೇಲೆ ಆಸಕ್ತಿ ಇರುವುದಿಲ್ಲ. ಏನಾದರೂ ದೊಡ್ಡ ನ್ಯೂಸ್ ಬೇಕು, ದೊಡ್ಡ ವಿಶೇಷತೆ ಬೇಕು. ಆಗ ವಿಷಯದ ಮೇಲೆ ಆಸಕ್ತಿ ಉಳಿಯುತ್ತದೆ' ಅಂದಳು.

'ಅದು ಸರಿ, ಆದರೆ ಹೇಗೆ ಯಾವಾಗಲೂ ವಿಶೇಷತೆ ತರುವುದು ನವ್ಯ?' ಪ್ರಭಾಕರ ಕೇಳಿದ.

'ನೋಡಿ ಪ್ರಭಾಕರ್, ಅದು ನಿಮಗೆ ಬಿಟ್ಟದ್ದು. ನಿಮ್ಮ ಕಾಳಜಿ ನೂರಕ್ಕೆ ನೂರರಷ್ಟು ಸರಿ. ಸಂಜಯ್ ಅವರು ಮರಳಿ ಅಮೆರಿಕಕ್ಕೆ ಹೊರಟರೆ ಸೀತಾಪುರದ ಸುದ್ದಿ ಕ್ರಮೇಣ ನಿಂತು ಹೋಗುವುದು ಖಂಡಿತ. ಅದಕ್ಕಾಗಿ ನೀವೇನಾದರೂ ದೊಡ್ಡ ನ್ಯೂಸ್ ಅನ್ನು ಸಂಜಯ್ ಹೊರಡುವ ಮೊದಲೇ ಸೃಷ್ಟಿ ಮಾಡಬೇಕು. ಆ ಬಗ್ಗೆ ಆಲೋಚನೆ ಮಾಡಿ' ಅಂದಳು.

'ದೊಡ್ಡ ನ್ಯೂಸ್ ಅಂದರೆ?' ಪ್ರಭಾಕರ ಕೇಳಿದ.

'ನೋಡಿ ಪ್ರಭಾಕರ್, ಈಗ ಸಂಜಯ್ ಅವರು 'ಒಂದು ಹಳ್ಳಿ ಎರಡು ತಿಂಗಳು' ಎನ್ನುತ್ತಾ ಸೀತಾಪುರವನ್ನು ಪರಿವರ್ತಿಸುವ ಪಣ ತೊಟ್ಟಿದ್ದಾರೆ. ಇದು ಎಲ್ಲರಿಗೂ ಆಸಕ್ತಿಯ ವಿಷಯವಾಗಿದೆ. ಸಂಜಯ್ ಈಗಾಗಲೇ ವಿಶ್ವ ಪ್ರಸಿದ್ಧ ವ್ಯಕ್ತಿ. ಈ

## ಕಳೆದ ಸಂಚಿಕೆಯಲ್ಲಿ



ಸಂದೇಶ್ ಮತ್ತು ನವ್ಯಳ ಆಗಮನದಿಂದಾಗಿ ಸೀತಾಪುರ ಮತ್ತಷ್ಟು ರಂಗು ಪಡೆದುಕೊಂಡಿತು. ಇಬ್ಬರೂ ಸ್ಪರ್ಧೆಗೆ ಬಿದ್ದವರಂತೆ, ಸೀತಾಪುರದಲ್ಲಿನ ವಿಶೇಷಗಳನ್ನು ಅಂತರ್ಜಾಲದ ಮೂಲಕ ವಿಶ್ವದ ಗಮನಕ್ಕೆ ತರತೊಡಗಿದರು. ಪಂಜುರ್ಲಿ ಕೋಲ ಕಟ್ಟುವ ಮಾದನ ಬೆನ್ನತ್ತಿ, ಆತನಿಂದ ವೇಷ ಹಾಕಿಸಿದ ನವ್ಯ, ಜಗತ್ತಿಗೆ ಜಾನಪದ ಕಲಾವಿದನನ್ನು ಪರಿಚಯಿಸಿದಳು. ಭೂತದ ಕೋಲದ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯಲು ಮಾದನಿಗೆ ಜರ್ಮನಿ ಪ್ರವಾಸದ ಅವಕಾಶ ದೊರೆಯಿತು. ಅದೇ ಸಮಯಕ್ಕೆ ಬಾಬಣ್ಣನ ಚಟ್ಟಂಬಡೆಯೂ ವಿಶ್ವಪ್ರಸಿದ್ಧಿಯಾಗಿ ಮುಂಬಯಿಯ ಫೈವ್‌ಸ್ಟಾರ್ ಹೋಟೆಲ್‌ನಿಂದ ಆಹ್ವಾನ ಬಂದು, ಸೀತಾಪುರದ ಖಾದ್ಯಗಳ ಉತ್ಸವವೇ ನಡೆಯುವಂತಾಯಿತು. ಸೀತಾಪುರದ ಸುತ್ತಮುತ್ತಲಿನ ಅಪೂರ್ವ ಕಾಡು ಹಾಗೂ ಅಲ್ಲಿನ ಜೀವಿವೈವಿಧ್ಯದ ಬಗ್ಗೆ ಅಧ್ಯಯನ ನಡೆಸಲು ಕುತೂಹಲಿಗಳ ದಂಡು ಸೀತಾಪುರದತ್ತ ಮುಖ ಮಾಡಿತು.